# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.616-2017** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎಂ.ರಾಜಶೇಖರ ಮೂರ್ತಿ<br>ನೇರಳೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 31-05-2024.** |

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎಸ್ ವಕೀಲರಿಂದಃ**

ನನ್ನ ತಾತ ಮುದ್ದುಬಸಪ್ಪ ರವರಿಗೆ ಇಬ್ಬರು ಮಕ್ಕಳು ಎಂದರೆ ಸರಿ. ಮುದ್ದುಬಸಪ್ಪ ರವರಿಗೆ ನನ್ನ ತಂದೆ ಮೊದಲನೆ ಮಗನಾಗಿದ್ದು, 1 ನೇ ಪ್ರತಿವಾದಿ ತಂದೆ 2 ನೇ ಮಗನಾಗಿರುತ್ತಾನೆ ಎಂದರೆ ಸರಿ. ನಮ್ಮ ತಾತ ಮುದ್ದುಬಸಪ್ಪ ರವರು ಮೃತಪಟ್ಟು ಸುಮಾರು 50-60 ವರ್ಷಗಳಾಗಿರಬಹುದು. ನನ್ನ ತಾತನವರ ಮರಣಾನಂತರ ಅವರಿಗೆ ಸೇರಿದ ಸ್ವತ್ತುಗಳ ಖಾತೆಯೂ ನನ್ನ ತಂದೆ ಮತ್ತು 1 ನೇ ಪ್ರತಿವಾದಿಯವರ ತಂದೆಯವರ ಹೆಸರಿನಲ್ಲಿ ಜಂಟಿ ಖಾತೆ ಇತ್ತು ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪ ಮರಣ ಹೊಂದಿದ ನಂತರ ನಮ್ಮ ಒಟ್ಟು ಕುಟುಂಬಕ್ಕೆ ಸೇರಿದ ಸ್ವತ್ತುಗಳಿಗೆ ಸಂಬಂಧಿಸಿದಂತೆ ನನ್ನ ತಾಯಿ ಮತ್ತು 1 ನೇ ಪ್ರತಿವಾದಿಯವರ ಹೆಸರಿಗೆ ಜಂಟಿ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ನನ್ನ ತಂದೆ ಮತ್ತು ಚಿಕ್ಕಪ್ಪನವರ ಜೀವಿತ ಕಾಲದಲ್ಲಿ ನಮ್ಮ ಒಟ್ಟು ಕುಟುಂಬದಲ್ಲಿ ಭಾಗವಾಗಿರುತ್ತದೆ ಎಂದು ನುಡಿಯುತ್ತಾರೆ. 1989 ರವರೆವಿಗೂ ನನ್ನ ತಾತನವರಿಗೆ ಸೇರಿದ ಪಿತ್ರಾರ್ಜಿತ ಸ್ವತ್ತುಗಳು ಒಟ್ಟು ಕುಟುಂಬದಲ್ಲಿಯೇ ಇತ್ತು ಎಂದರೆ ಸರಿ. ನನ್ನ ತಂದೆಯವರಿಗೆ ಒಂದು ಮನೆ ಮತ್ತು ನಿವೇಶನವು ವಿಭಾಗದಲ್ಲಿ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ನಿವೇಶನವು ನನ್ನ ತಂದೆಯವರಿಗೆ ಸೇರಿದ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ.

2. ನಾವು ಹೊಸ ಮನೆಯನ್ನು ಕಟ್ಟಿ ಸುಮಾರು 25 ವರ್ಷಗಳಾಗಿರುತ್ತವೆ. ನನ್ನ ತಂದೆಯವರು ರೈಲ್ವೇ ಪೊಲೀಸ್ ಆಗಿದ್ದರು ಎಂದರೆ ಸರಿ. ನನ್ನ ತಂದೆಯವರು ಕೆಲಸದಿಂದ ನಿವೃತ್ತಿ ಹೊಂದಿ ಸುಮಾರು 20 ವರ್ಷಗಳಾಗಿರುತ್ತವೆ. ನಾವು ಮನೆ ಕಟ್ಟಿರುವ ಸ್ವತ್ತು ಸರ್ಕಾರದಿಂದ ಮಂಜೂರಾದ ನಿವೇಶನ ಆಗಿರುತ್ತೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಸ್ವತ್ತನ್ನು ನನ್ನ ತಂದೆಯವರು ಬೇರೆಯವರಿಂದ ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಮನೆ ಕಟ್ಟಿರುವ ಸ್ವತ್ತನ್ನು ಬೇರೆಯವರಿಂದ ಖರೀದಿ ಮಾಡಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾವು ಮನೆ ಕಟ್ಟಿರುವ ಸ್ವತ್ತು ನನ್ನ ತಂದೆಯವರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತಾಗಿರುತ್ತದೆ ಎಂದರೆ ಸರಿ. ನಾವು ಮನೆ ಕಟ್ಟಿರುವ ಸ್ವತ್ತು ಸರ್ಕಾರದಿಂದ ಮಂಜೂರಾಗಿದ್ದು ನನ್ನ ತಂದೆಯವರು ಸರ್ಕಾರ ನೌಕರನಾಗಿದ್ದರಿಂದ ಅವರಿಗೆ ನಿವೇಶನ ಮಂಜೂರಾಗಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

3. ನನ್ನ ತಂದೆಯವರ ಹೆಸರು ಎನ್.ಎಂ.ಮಹದೇವಪ್ಪ ಬಿನ್ ಮುದ್ದುಬಸಪ್ಪ ಎಂದರೆ ಸರಿ. ನನ್ನ ತಂದೆಯವರನ್ನು ಹೊರತುಪಡಿಸಿ ಎನ್.ಎಂ.ಮಹದೇವಪ್ಪ ಬಿನ್ ಮುದ್ದುಬಸಪ್ಪ ಎಂಬ ಹೆಸರಿನ ವ್ಯಕ್ತಿ ನಮ್ಮ ಊರಿನಲ್ಲಿ ಇರುವುದಿಲ್ಲ. ನನ್ನ ತಂದೆಯವರಿಗೆ ಜಂಜರ್ ನಂ.292 ಸ್ವತ್ತಿನ ನಂ.218 ರ ಸ್ವತ್ತು ಸರ್ಕಾರದಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ನನ್ನ ತಂದೆಯವರ ಮರಣಾನಂತರ ಸದರಿ ಸ್ವತ್ತಿನ ಖಾತೆಯೂ ನನ್ನ ತಾಯಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ಸುಮಾರು 15 ವರ್ಷಗಳಿಂದ ಮೈಸೂರಿನ ಆಲನಹಳ್ಳಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 10 ವರ್ಷಗಳಿಂದ ವಾಸವಾಗಿರುತ್ತಾರೆ ಎಂದು ನುಡಿಯುತ್ತಾರೆ.

4. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತಾಗಿರುತ್ತದೆ. ನನ್ನ ತಂದೆಯವರಿಗೆ ಸರ್ಕಾರದಿಂದ ದಾವಾ

ಷೆಡ್ಯೂಲ್ ಸ್ವತ್ತು  ಮಂಜೂರಾದ ನಂತರ ಮಂಜೂರಾತಿ ಪ್ರಮಾಣ ಪತ್ರವನ್ನು ನೀಡಿರುವುದಿಲ್ಲ, ಅದರೆ ನನ್ನ ತಂದೆಯವರ ಹೆಸರಿನಲ್ಲಿ ಪಂಚಾಯ್ತಿಯಿಂದ ಖಾತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಹೇಳುವಂತೆ ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ  ಸರ್ಕಾರದಿಂದ ಮಂಜೂರಾಗಿರುವುದಿಲ್ಲ, ಒಂದು ವೇಳೆ ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರಿಗೆ  ಸರ್ಕಾರದಿಂದ ಮಂಜೂರಾಗಿದ್ದರೆ ಸದರಿ ದಾಖೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

5. ನನ್ನ ತಂದೆಯವರಿಗೆ ಎನ್.ಎಂ.ಮಹದೇವಪ್ಪ ಉರುಫ್ ರಾಜು ಎಂದು ಎರಡು ಹೆಸರು ಇದೆ ಎಂದು ತೋರಿಸಲು  ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ತಂದೆಯವರಿಗೆ ರಾಜು ಎಂಬ ಹೆಸರು ಇಲ್ಲದೇ ಇದ್ದುದ್ದರಿಂದ ನಾನು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–1 ರಲ್ಲಿ ನನ್ನ ತಂದೆಯವರ ಹೆಸರು ಎನ್.ಎಂ.ಮಹದೇವಪ್ಪ ಎಂಬುದರ ಬಗ್ಗೆ ನಮೂದು ಇರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು 1980 ರಲ್ಲಿ ಮಂಜೂರಾದ ಸ್ವತ್ತುಗಳಾಗಿರುತ್ತವೆ ಎಂದರೆ ಸರಿಯಲ್ಲ. 1980 ರಿಂದ ಈ ದಾವೆ ಸಲ್ಲಿಸುವರೆವಿಗೂ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿ ಮಾಡಿದ್ದೀರಾ ಎಂಬ ಪ್ರಶ್ನೆಗೆ ನಾನು ಪಾವತಿ ಮಾಡಿರುವುದಿಲ್ಲ, ಆದರೆ ನನ್ನ ತಂದೆಯವರು ಪಾವತಿ ಮಾಡಿರಬಹುದು, ಅದರ ಬಗ್ಗೆ ನನಗೆ ಖುದ್ದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

6. ನಮ್ಮ ತಂದೆಯವರ ಭಾಗಕ್ಕೆ ಬಂದಂತಹ ಪಿತ್ರಾರ್ಜಿತ ಸ್ವತ್ತುಗಳನ್ನು ಅವರ ಜೀವಿತ ಕಾಲದಲ್ಲಿಯೇ ನನ್ನ ತಾಯಿಯವರ ಹೆಸರಿಗೆ ವರ್ಗಾವಣೆ ಮಾಡಲಾಗಿತ್ತು ಎಂದರೆ ಸರಿ. ದಾವಾ ಷೆಡ್ಯೂಲ್ ಸ್ವತ್ತು ನನ್ನ ತಂದೆಯವರ ಜೀವಿತ ಕಾಲದಲ್ಲಿ ನನ್ನ ತಾಯಿಯವರ ಹೆಸರಿಗೆ ವರ್ಗಾವಣೆ ಆಗಿರಲಿಲ್ಲ ಎಂದರೆ ಸರಿ. ದಾವಾ ಷೆಡ್ಯೂಲ್

ಸ್ವತ್ತು ನನ್ನ ತಂದೆಯವರಿಗೆ ಸೇರಿದ ಸ್ವತ್ತು ಆಗದೇ ಇದ್ದುದ್ದರಿಂದ ನನ್ನ ತಾಯಿಯವರ ಹೆಸರಿಗೆ ದಾವಾ ಷೆಡ್ಯೂಲ್ ಸ್ವತ್ತಿನ ಖಾತೆಯನ್ನು ವರ್ಗಾವಣೆ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಸದರಿ ಪೋಟೋದಲ್ಲಿ ಕಾಣುತ್ತಿರುವ ಸ್ವತ್ತೇ ದಾವಾ ಸ್ವತ್ತು ಎಂದರೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದರಿ ಪೋಟೋವನ್ನು ನಿಡಿ–1 ಎಂದು ಗುರುತಿಸಲಾಯಿತು.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು**)

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**